S J P N Trust's

# Hirasugar Institute of Technology, Nidasoshi

*Inculcating Values, Promoting Prosperity*

Approved by AICTE, Recognized by Govt. of Karnataka and Affiliated to VTU Belagavi.

**Accredited at 'A' Grade by NAAC**

**Programmes Accredited by NBA: CSE, ECE, EEE & ME.**

| Principal |
|---|
| EST |
| Office |

HIT/NDS/EST/19/2020-21 Date: 12-05-2020

## ಸುತ್ತೋಲೆ

ಈ ಮೂಲಕ ಎಲ್ಲ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರಿಗೆ ತಿಳಿಸುವುದೇನೆಂದರೆ ಕರ್ನಾಟಕ ಸರ್ಕಾರವು ವಿಶ್ವವ್ಯಾಪ್ತಿಯಾಗಿ ಹರಡಿಕೊಳ್ಳುತ್ತಿರುವ ಕೊರೋನಾ ವೈರಸ್ ಒಂದು ಸಾಂಕ್ರಾಮಿಕ ರೋಗವೆಂದು ಘೋಷಿಸಿರುವುದರಿಂದ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸುತ್ತೋಲೆ ಸಂಖ್ಯೆ: ವಿತಾವಿ/ಪಿಎಸ್/2019–20/46 ದಿನಾಂಕ 11–05–2020ರಲ್ಲಿ ತಿಳಿಸಿದಂತೆ ಈ ಕೆಳಗಿನ ಸೂಚನೆಗಳ ಪ್ರಕಾರ ದಿನಾಂಕ 13.05.2020 ರಿಂದ ಡ್ಯೂಟಿಗೆ ಹಾಜರಾಗಬೇಕೆಂದು ತಿಳಿಸಲಾಗಿದೆ.

| | |
|---|---|
| 1. | ಎಲ್ಲ ಬೋಧಕರು (ಶಿಕ್ಷಕರು) ಡ್ಯೂಟಿಗೆ ಹಾಜರಾಗುವುದು |
| 2. | ಸ್ಥಾನಿಕವಾಗಿ(ಲೋಕಲ್) ವಾಸವಿರುವ ಬೋಧಕೇತರ ಸಿಬ್ಬಂದಿಯವರು ಮಾತ್ರ ಡ್ಯೂಟಿಗೆ ಹಾಜರಾಗಬೇಕು (ಕೊರಾನಾ ವೈರಸ್ ಸೊಂಕು ಪಾಸಿಟಿವ್ ಪ್ರಕರಣಗಳು ಕಂಡು ಬಂದಿರುವ ಹಾಗೂ ಕಂಟೆನಮೆಂಟ ಝೋನ್ ಎಂದು ಘೋಸಿಸಲ್ಪಟ್ಟು ಸೀಲ್ ಡೌನ ಆದ ಪ್ರದೇಶದಲ್ಲಿ ವಾಸವಾಗಿರುವ ಸಿಬ್ಬಂದಿಗಳು ಕೆಲಸಕ್ಕೆ ಹಾಜರಾಗುವ ವಿನಾಯಿತಿಗಾಗಿ ಪ್ರಾಂಶುಪಾಲರಿಂದ ಪೂರ್ವಾನುಮತಿ ಪಡೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ). |
| 3. | ಬೋಧಕ ಸಿಬ್ಬಂದಿಯವರು ಮಹಾವಿದ್ಯಾಲಯದಲ್ಲಿ ಎಂದಿನಂತೆ ಆನ್ ಲಾಯಿನ ಬೋಧನೆ ನಡೆಸಿ ಎಲ್ಲ ಪಠ್ಯಕ್ರಮವನ್ನು ದಿನಾಂಕ 31–5–2020 ರ ಒಳಗಾಗಿ ಪೂರ್ಣಗೊಳಿಸುವುದು. |
| 4. | ಆಂತರಿಕ ಪರೀಕ್ಷೆ, ಪ್ರಾಯೋಗಿಕ ಪರೀಕ್ಷೆ ಹಾಗೂ ಅಂತಿಮ ವರ್ಷದ ಪ್ರೊಜೆಕ್ಟನ ಆಂತರಿಕ ಪರೀಕ್ಷೆಯನ್ನು ಉನ್ನತ ಶಿಕ್ಷಣ ಇಲಾಖೆಯು ಸೂಚಿಸಿದ ನಿರ್ದೇಶನದಂತೆ 31–05–2020 ರೊಳಗೆ ಪೂರ್ಣಗೊಳಿಸುವುದು. |
| 5. | ಮಹಾವಿದ್ಯಾಲಯದ ಎಲ್ಲ ಸಿಬ್ಬಂದಿಯವರು ಕಡ್ಡಾಯವಾಗಿ ಮಾಸ್ಕ ಧರಿಸುವುದು. |
| 6. | ವಿವಿಧ ವಿಭಾಗಗಳ ಮುಖ್ಯಸ್ಥರು ರೋಟೇಷನ್ ಆಧಾರದ ಮೇಲೆ ಆಯಾ ವಿಭಾಗದ ಒಬ್ಬರು ಅಟೆಂಡರ ಮಾತ್ರ ಹಾಜರಾತಿ ಪುಸ್ತಕವನ್ನು ತೆಗೆದುಕೊಂಡು ಹೋಗಿ ಆಯಾ ವಿಭಾಗದ ಸಿಬ್ಬಂದಿಗಳ ಅವರವರ ಸ್ಥಳದಲ್ಲಿ ಹಾಜರಾತಿಯನ್ನು ತೆಗೆದುಕೊಳ್ಳಲು ಸೂಚನೆ ನೀಡಬೇಕು. |
| 7. | ಕೆಲಸಕ್ಕೆ ಹಾಜರಾಗುವ ಸಮಯದಲ್ಲಿ ಮಹಾವಿದ್ಯಾಲಯವು ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಧರಿಸಬೇಕು. |
| 8. | ಕಛೇರಿಯಲ್ಲಿ ಸಿಬ್ಬಂದಿಗಳ ನಡುವೆ ಅಂತರವನ್ನು ಕಾಯ್ದುಕೊಂಡು ಕಾರ್ಯನಿರ್ವಹಿಸಬೇಕು. |

12/5/20

PRINCIPAL
Hirasugar Institute of Technology
NIDASOSHI-591 236

Nidasoshi-591 236, Taq: Hukkeri, Dist: Belagavi, Karnataka, India.
Phone: +91-8333-278887, Fax: 278886, Web: www.hsit.ac.in, E-mail: principal@hsit.ac.in

S J P N Trust's

**Hirasugar Institute of Technology, Nidasoshi**

*Inculcating Values, Promoting Prosperity*

Approved by AICTE, Recognized by Govt. of Karnataka and Affiliated to VTU Belagavi.

**Accredited at 'A' Grade by NAAC**

**Programmes Accredited by NBA: CSE, ECE, EEE & ME.**

| Principal |
|---|
| EST |
| Office |

| | |
|---|---|
| 9. | ಎಲ್ಲ ಸಿಬ್ಬಂದಿಯವರು ತಮ್ಮ ವೈಯಕ್ತಿಕ ಆರೋಗ್ಯದ ಕಡೆಗೆ ಗಮನಕೊಡತಕ್ಕದ್ದು. ಯಾವುದೇ ಸಿಬ್ಬಂದಿಗೆ ಉಸಿರಾಟ ತೊಂದರೆ, ಕೆಮ್ಮು, ಜ್ವರ ಮತ್ತು ಶೀತ ಇರುವುದು ಕಂಡುಬಂದಲ್ಲಿ ವಿಭಾಗದ ಮುಖ್ಯಸ್ಥರ ಗಮನಕ್ಕೆ ತರುವುದು ಮತ್ತು ಅಗತ್ಯ ಚಿಕಿತ್ಸೆ ಒಳಪಡಿಸುವುದು. ಇತರೆ ಸಿಬ್ಬಂದಿಗಳಿಂದ ದೂರವಿರುವುದು. |
| 10. | ಮಹಾವಿದ್ಯಾಲಯದ ಕೆಲಸದ ಸಮಯದಲ್ಲಿ ಸಾಮಾಜಿಕ ಅಂತರದ ಜೊತೆಗೆ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಎಲ್ಲ ಸಿಬ್ಬಂದಿಯವರ ಕರ್ತವ್ಯವಾಗಿರುತ್ತದೆ. |
| 11. | ಕೆಲಸದ ಅವಧಿಯಲ್ಲಿ ಆಗಾಗ ಸ್ಯಾನಿಟೈಸರ್ ಅಥವಾ ಡಿಟರ್ಜೆಂಟ ಬಳಸಿ ಕೈಗಳನ್ನು ತೊಳೆಯುವುದು. |
| 12. | ಕಾಲೇಜಿನ ಆವರಣದಲ್ಲಿ ಅನಗತ್ಯವಾಗಿ ತಿರುಗಾಡಬಾರದು ಮತ್ತು ಕೋವಿಡ–19 ಸೋಂಕು ಬಾದಿತ ಪ್ರದೇಶಗಳಿಗೆ ಪ್ರಯಾಣಿಸಬಾರದು. |
| 13. | ಕರ್ನಾಟಕ ಸರಕಾರ ಹೊರಡಿಸಿರುವ ಸುತ್ತೋಲೆಯ ಎಲ್ಲ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು. |
| 14. | ಬಸ್ಸಿನಲ್ಲಿ ಪ್ರಯಾಣಿಸುವ ಸಿಬ್ಬಂದಿಯವರು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು ಮತ್ತು ಆದಷ್ಟು ಸ್ವಂತ ವಾಹನ ತೆಗೆದುಕೊಂಡು ಬರಬೇಕು. |
| 15. | ಕಾಲೇಜಿನ ಆವರಣದಲ್ಲಿ ಗುಟ್ಕಾ ಮತ್ತು ತಂಬಾಕು ಸೇವನೆ ಮಾಡುವುದನ್ನು ನಿಷೇದಿಸಲಾಗಿದೆ ತಪ್ಪಿದಲ್ಲಿ ಅಂತವರ ವಿರುದ್ದ ಕಠಿಣ ಕ್ರಮ ಕೈಕೊಳ್ಳಲಾಗುವುದು. |
| 16. | ಎಲ್ಲ ಸಿಬ್ಬಂದಿಯವರು ಕಡ್ಡಾಯವಾಗಿ ಆರೋಗ್ಯ ಸೇತು ಆ್ಯಪ್‌ನ್ನು ಮೋಬೈಲ್‌ನಲ್ಲಿ ಡೌನಲೋಡ್ ಮಾಡಿಕೊಂಡು ಬಳಕೆ ಮಾಡಬೇಕು. |
| 17 | ಮಹಾವಿದ್ಯಾಲಯದ ಕೆಲಸದ ಅವಧಿ ಮುಂಜಾನೆ 10 ಗಂಟೆಯಿಂದ ಸಾಯಂಕಾಲ 5.00 ಗಂಟೆಯವರೆಗೆ ಇರುತ್ತದೆ. |

Hirasugar Institute of Technology, Nidasoshi Pin-591236 Dt. Belgaum

ಡಾ.ಎಸ್.ಸಿ.ಕಮತೆ

ಪ್ರಾಂಶುಪಾಲರು

PRINCIPAL

Hirasugar Institute of Technology

NIDASOSHI-591 236

ಪ್ರತಿ:

1) ಸುತ್ತೋಲೆ ಎಲ್ಲ ಸಿಬ್ಬಂದಿಯವರ ಮಾಹಿತಿಗಾಗಿ
2) ಕಾರ್ಯದರ್ಶಿಗಳು ಎಸ್.ಜೆ.ಪಿ.ಎನ್.ಟ್ರಸ್ಟ ನಿಡಸೋಸಿ ಇವರ ಮಾಹಿತಿಗಾಗಿ
3) ಆಫೀಸ ಪ್ರತಿ

Nidasoshi-591 236, Taq: Hukkeri, Dist: Belagavi, Karnataka, India.
Phone: +91-8333-278887, Fax: 278886, Web: www.hsit.ac.in, E-mail: principal@hsit.ac.in